# ವೃಂದಾವನದೊಳು ಆಡುವನ್ಯಾರೇ ಗೋಪಿ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 100
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 519.
3. **Note:** Lyrics in both the above references are same and matching. Singer has followed these wordings.

ರಾಗ: ಶ್ರೀ ತಾಳ: ಆದಿ

ವೃಂದಾವನದೊಳಾಡುವನ್ಯಾರೆ ಗೋಪಿ
ಚಂದಿರವದನೆ ನೋಡುವ ಬಾರೆ || ಪ ||

ಅರುಣಪಲ್ಲವ ಪಾದಯುಗಳನೆ, ದಿವ್ಯ
ಮರಕತ ಮಂಜುಳಾಭರಣನೆ
ಸಿರಿವರ ಯಧುಕುಲ ಸೋಮನೆ, ಇಂಥಾ
ಪರಿಪೂರ್ಣ ಕಾಮ ನಿಸ್ಸಿಮನೆ || 1 ||

ಹಾರ-ಹೀರ ಗುಣಧಾಮನೆ ದಿವ್ಯ
ಸಾರ ಶರೀರ ಶೃಂಗಾರನೆ
ಆರಿಗಾದರು ಮನೋದೂರನೆ, ತನ್ನ
ಸೇರಿದವರ ಮಾತ ಮೀರನೆ || 2 ||

ಮಕರಕುಂಡಲ ಕಾಂತಿ-ಭರಿತನೆ, ದಿವ್ಯ
ಅಕಳಂಕ ರೂಪ ಲಾವಣ್ಯನೆ
ಸಕಲರೊಳಗೆ ದೇವನೀತನೆ ನಮ್ಮ
ಮುಕುತೀಶ ಪುರಂದರ ವಿಠಲನೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೊಲ್ಲತಿಯೊಬ್ಬಳು ವೃಂದಾವನದಲ್ಲಿ ವಿಹಾರ ಮಾಡುವ ವಂಶೀಧರ ಕೃಷ್ಣನನ್ನು ನೋಡೋಣ ಬಾರೆ ಎಂದು ಕರೆಯುವ ಮಾತುಗಳು ಈ ಹಾಡಿನಲ್ಲಿವೆ.

**ಅರುಣ-ಪಲ್ಲವ** = ಕೆಂಪು ಚಿಗುರು

**ಮರಕತ** = ಪಚ್ಚೆ

**ಹಾರ-ಹೀರ** = ವಜ್ರದ ಹಾರ

**ಸಾರ ಶರೀರ** = ತುಂಬಿದ ಮೈ

**ಮನೋದೂರ** = ಮನಸ್ಸಿಗೆ ತಿಳಿಯದಂತಹವನು (ಆಗಮ್ಯ)

**Classification:** Keerthane
**Ankita:** Purandara Vittala
**Location:** NA
**Category:** Krishna Leele
**Sub-Category:** Krishna, vrindavana, gopi, Chandra, aruna, divya, abharana, purna, deha, mana, deva, mukti,
**Pravachana:** NA
**Explanation:** NA